# ಶೆಫಾಲಿಯ ಹಳೆ ಕಷ್ಟ!

■ ವಿಶಾಖ ಎನ್.

2005ರಲ್ಲಿ 'ವಕ್ತ್' ಎಂಬ ಹಿಂದಿ ಸಿನಿಮಾ ತೆರೆಕಂಡಿತ್ತು. ಅಕ್ಷಯ್ ಕುಮಾರ್ ಹಾಗೂ ಅಮಿತಾಭ್ ಬಚ್ಚನ್ ಅಭಿನಯದ ಚಿತ್ರ ಅದು. ಅಕ್ಷಯ್‌ಗೆ ಆಗ ಮೂವತ್ತೆಂಟು ವಯಸ್ಸು. ಆ ಚಿತ್ರದಲ್ಲಿ ಅವರ ತಾಯಿಯಾಗಿ ನಟಿಸಿದ್ದ ಶೆಫಾಲಿ ಶಾ ಅವರಿಗೆ ಇಪ್ಪತ್ತೆಂಟರ ಹರೆಯ. ದೊಡ್ಡ ಸಿನಿಮಾ ಎಂದು ಕಣ್ಮುಚ್ಚಿಕೊಂಡು ಒಪ್ಪಿಬಿಟ್ಟಿದ್ದರು. ಸಿನಿಮಾ ತೆರೆಕಂಡ ಮೇಲೆ ಪೀಕಲಾಟ ಶುರುವಾಯಿತು. ತಾಯಿಯ ಪಾತ್ರಗಳಿಗೆ ಆಹ್ವಾನ ಬರತೊಡಗಿತು. ಸ್ವಲ್ಪ ದಿನ ಅವರು ಮನೆಯ ಕದವಿಕ್ಕಿಕೊಂಡರು.

'ಚಿತ್ರರಂಗ ಎಷ್ಟು ಕ್ರೂರಿ ಎಂದು ಅನಿಸುವುದೇ ಅಂತಹ ಸಂದರ್ಭಗಳಲ್ಲಿ. ನಾಯಕರಿಗೆ ವಯಸ್ಸು ಆಗುವುದೇ ಇಲ್ಲ. ಹೆಣ್ಣುಮಕ್ಕಳು ಒಂದು ಪಾತ್ರ ಮಾಡಿ, ಅದಕ್ಕೆ ನ್ಯಾಯ ಒದಗಿಸಿದರೆ ಏಕತಾನತೆಗೆ ಸಿಲುಕಿಸಲು ಮಾರುಕಟ್ಟೆ ಸಜ್ಜಾಗಿಬಿಡುತ್ತದೆ. ನಾನು ವಕ್ತ್ ಬಂದ ನಂತರ ಎಷ್ಟೋ ಚಿತ್ರಗಳ ಅವಕಾಶಗಳನ್ನು ಕೈಚೆಲ್ಲಿದೆ. ಗಟ್ಟಿ ಪಾತ್ರಗಳು ಸಿಗದೇಹೋದರೆ ನಟಿಸುವುದೇ ಬೇಡ ಎಂದು ಸುಮ್ಮನಾದೆ. ಮನೆಯಲ್ಲೇ ಕುಳಿತರೂ ಚಿಂತೆ ಇಲ್ಲ ಎಂದು ನಿರ್ಧರಿಸಿದೆ' ಎಂದು ಇತ್ತೀಚಿನ ಸಂದರ್ಶನವೊಂದರಲ್ಲಿ ಶೆಫಾಲಿ ಹೇಳಿದ್ದರು.

ಶೆಫಾಲಿ ಚೆನ್ನಾಗಿ ಅಡುಗೆ ಮಾಡುತ್ತಾರೆ. ತಿನ್ನುವುದರಲ್ಲೂ ಸದಾ ಮುಂದು. ಡಯೆಟ್ ಅಂತೇನೂ ಮಾಡುವವರ ಪೈಕಿ ಅಲ್ಲ. ತಮ್ಮ ಆಹಾರ ಪ್ರೀತಿಯನ್ನೇ ಆಧಾರವಾಗಿಟ್ಟುಕೊಂಡು ಹೋಟೆಲ್ ಉದ್ಯಮಕ್ಕೆ ಕಾಲಿಟ್ಟಿದ್ದಾರೆ. ಅಹಮದಾಬಾದ್‌ನಲ್ಲಿ ತಮ್ಮದೇ ಹೊಸ ಹೋಟೆಲ್ ಅನ್ನು ಪ್ರಾರಂಭಿಸಿದ್ದಾರೆ.



ನೆಟ್‌ಫ್ಲಿಕ್ಸ್‌ನಲ್ಲಿ ಪ್ರಸಾರವಾದ 'ಡೆಲ್ಲಿ ಕ್ರೈಮ್' ಸರಣಿಯಲ್ಲಿನ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಶೆಫಾಲಿ ನಟಿಸಿದ್ದರು. ಅವರ ಅಭಿನಯ ಕೌಶಲಕ್ಕೆ ವಿಶ್ವದ ಹಲವೆಡೆಯಿಂದ ಶಹಬ್ಬಾಸ್‌ಗಿರಿ ಸಿಕ್ಕಿದೆ. ರಾಮ್ ಗೋಪಾಲ್ ವರ್ಮಾ ನಿರ್ದೇಶನದ 'ಸತ್ಯ' ಸಿನಿಮಾದಲ್ಲಿ ಹರಿತವಾದ ದೇಸಿ ಮಾತುಗಳಿಂದ ಅವರ ಪಾತ್ರ ಜನಮನ್ನಣೆ ಪಡೆದಿದೆ. ■



# ರಾಜಮೌಳಿಯ ಹೊಗಳಿದ ಆಲಿಯಾ

ಆಲಿಯಾ ಭಟ್ ಮುಖದ ಮೇಲೆ ದೇವಿಕಳೆ. ಹೀಗೆಂದು ಸಾಮಾಜಿಕ ಜಾಲತಾಣಗಳಲ್ಲಿ 'ಆರ್‌ಆರ್‌ಆರ್' ಚಿತ್ರದ ತುಣುಕುಗಳಲ್ಲಿನ ಅವರ ಚಹರೆ ಕಂಡವರು ಹೊಗಳುತ್ತಿದ್ದಾರೆ. ಎಂಟು ತಿಂಗಳ ಬಿಡುವಿನ ನಂತರ ಕಳೆದ ಅಕ್ಟೋಬರ್‌ನಲ್ಲಿ ಆಲಿಯಾ ಮತ್ತೆ ಈ ಸಿನಿಮಾದ ಚಿತ್ರೀಕರಣಕ್ಕೆ ಹಾಜರಾದರು. ಒಂದೂವರೆ ವರ್ಷಗಳಿಂದ ಇದಕ್ಕಾಗಿ ಅವರು ಡೇಟ್ಸ್ ಹೊಂದಿಸಿ ಕೊಟ್ಟಿದ್ದಾರೆ. ಸಾಮಾನ್ಯವಾಗಿ ಹಿಂದಿ ಚಿತ್ರರಂಗದಲ್ಲಿ ಒಂದಾದ ಮೇಲೆ ಒಂದು ಚಿತ್ರಗಳಲ್ಲಿ ನಟಿಸುವ ಆಲಿಯಾ ಅವರಂಥವರಿಗೆ ಇಷ್ಟು ಸುದೀರ್ಘಾವಧಿ ಡೇಟ್ಸ್ ಹೊಂದಿಸುವುದು ಸುಲಭವಲ್ಲ.

'ದಕ್ಷಿಣ ಭಾರತದ ಗೊತ್ತಿಲ್ಲದ ಭಾಷೆಯಲ್ಲಿ ಮೊದಲ ಸಲ ಅಭಿನಯಿಸುತ್ತಿರುವೆ. ರಾಜಮೌಳಿ ಸರ್ ತರಹದ, ಜೀವನದ ಸಹಜ ಪಾತ್ರಗಳಿಗಿಂತ ದೊಡ್ಡದಾದದ್ದನ್ನು ಸೃಷ್ಟಿಸುವವರ ಕ್ರಿಯಾಶೀಲತೆ ಕಂಡು ಬೆರಗಾಗಿದ್ದೇನೆ. ರಾಮ್‌ಚರಣ್ ಹಾಗೂ ಜೂನಿಯರ್ ಎನ್‌ಟಿಆರ್ ನಟನಾ ಸಾಮರ್ಥ್ಯದಿಂದಲೂ ಕಲಿತಿರುವೆ. ಬೆಳಿಗ್ಗೆ ತಿಂಡಿ, ಮಧ್ಯಾಹ್ನದ ಊಟ, ರಾತ್ರಿ ಊಟದ ಹೊತ್ತಿನಲ್ಲೂ ಗೊತ್ತಿಲ್ಲದ ತೆಲುಗು ಭಾಷೆಯ ಸಂಭಾಷಣೆಯನ್ನು ಮನಸ್ಸಿನಲ್ಲೇ ಹೇಳಿಕೊಳ್ಳುತ್ತಾ ಪಳಗಿದೆ. ಇದೊಂದು ಅಪರೂಪದ ಅನುಭವ' ಎಂದು ಆಲಿಯಾ ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

'ಆರ್‌ಆರ್‌ಆರ್' ಚಿತ್ರದಲ್ಲಿ ರಾಮ್‌ಚರಣ್‌ಗೆ ಜೋಡಿಯಾಗಿ ಆಲಿಯಾ ಕಾಣಿಸಿಕೊಳ್ಳುತ್ತಿದ್ದಾರೆ. ಅಲ್ಲೂರಿ ಸೀತಾರಾಮರಾಜು ಹಾಗೂ ಕೋಮರಂ ಭೀಮ್ ಎಂಬ ನಿಜ ಬದುಕಿನ ಪಾತ್ರಗಳನ್ನು ರಾಜಮೌಳಿ ತೆರೆಗೆ ತರುತ್ತಿದ್ದಾರೆ. 1920ರ ದಶಕದಲ್ಲಿ ನಡೆದ ಕಥನವನ್ನು ಈ ಚಿತ್ರ ಒಳಗೊಂಡಿದೆ. 'ಬಾಹುಬಲಿ' ಸರಣಿ ಚಿತ್ರಗಳಿಂದಾಗಿ ದೇಶದ ಉದ್ದಗಲ ಮಾರುಕಟ್ಟೆ ಸೃಷ್ಟಿಸಿಕೊಂಡಿರುವ ರಾಜಮೌಳಿ, ಈ ಚಿತ್ರಕ್ಕೆ ಆಲಿಯಾ ಅವರನ್ನು ನಾಯಕಿಯಾಗಿಸಿರುವುದೂ ಅಂತಹ ಲೆಕ್ಕಾಚಾರದಿಂದಲೇ.

ಚಿತ್ರದಲ್ಲಿ ಅಜಯ್ ದೇವಗನ್, ಶ್ರಿಯಾ ಸರಣ್ ಕೂಡ ನಟಿಸಿದ್ದಾರೆ. ■